ಓಎಸ್ ನಂಬರ್:25/2023 ಪಿ ಡಬ್ಲ್ಯು:1

**<u>ದಿ:06.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ:</u>** ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳನ್ನು ತಾನೇ ಹೇಳಿ ಬರೆಸಿರುವುದಾಗಿ ಮತ್ತು ಸತ್ಯವಾಗಿದೆ ಎಂದು ನುಡಿದಿದ್ದಾರೆ.

ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಆರ್.ಟಿ.ಸಿ ನಿಪಿ.1 ಎಂದು, ಪ್ರತಿವಾದಿ 1 ಮತ್ತು 2 ಹಾಗೂ ಪಿಡಿಓ ಮಕ್ಕಂದೂರು ಗ್ರಾಮ ಪಂಚಾಯತಿಯವರಿಗೆ ನಮ್ಮ ವಕೀಲರ ಮುಖಾಂತರ ನೀಡಿರುವಂತಹ ನೋಟೀಸಿನ ಕಚೇರಿ ಪ್ರತಿ ನಿಪಿ.2 ಎಂದು, ಆರ್.ಪಿ.ಡಿ ರಶೀದಿ ನಿಪಿ.3 ಎಂದು, ಸದರಿ ನೋಟೀಸ್ ಪಿಡಿಓ ಮಕ್ಕಂದೂರು ಗ್ರಾಮ ಪಂಚಾಯತಿಯವರಿಗೆ ಜಾರಿ ಆದ ಬಗ್ಗೆ ಅಂಚೆ ಸ್ವೀಕೃತಿ ಪತ್ರ ನಿಪಿ.4 ಎಂದು, ಸದರಿ ನೋಟೀಸ್ 1 ಮತ್ತು 2ನೇ ಪ್ರತಿವಾದಿಯವರಿಗೆ ಜಾರಿ ಆಗದೇ ಹಿಂತಿರುಗಿರುವ ಅಂಚೆ ಲಕೋಟೆ ನಿಪಿ.5 ಮತ್ತು 6 ಎಂದು, ಮತ್ತು ಅದರ ಒಳಗೆ ಇರುವ ನೋಟೀಸ್ಸಿನ ಪ್ರತಿ ನಿಪಿ.5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.